ಬಹುತೇಕ ಕೈಗಾರಿಕೆಗಳು ಮತ್ತು ಇತರೆ ಸ್ಥಳಗಳಲ್ಲಿ ಉದ್ಯೋಗದಿಂದ ಬಾಲ ಕಾರ್ಮಿಕರು ಶೋಷಣೆಗೊಳಗಾಗುತ್ತಿರುವ ಬಗ್ಗೆ

1463: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಹುತೇಕ ಕೈಗಾರಿಕೆಗಳು ಮತ್ತು ಇತರೆ ಸ್ಥಳಗಳಲ್ಲಿ ಉದ್ಯೋಗದಿಂದ ಬಾಲ ಕಾರ್ಮಿಕರು ಶೋಷಣೆಗೊಳಗಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಹಾಗಿದ್ದಲ್ಲಿ, ಇದು ಕಾರ್ಮಿಕ ಕಾಯಿದೆಯ ಉಲ್ಲಂಘನೆ ಅಲ್ಲವೆ;

ಇ. ಬಾಲ ಕಾರ್ಮಿಕರನ್ನು ಉದ್ಯೋಗ ಮಾಡಲು ಅನುಮತಿಸುವುದರ ಪರಿಣಾಮವಾಗಿ ಹೆತ್ತವರನ್ನು ತ್ಯಜಿಸುವುದು ಮತ್ತು ಅದರಿಂದ ಮೂಲ ಸಮಾಜ ವಿರೋಧಿಗಳಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಕಾಯಿದೆಯ ಅನ್ವಯ ಕಟ್ಟುನಿಟ್ಟಾಗಿ ಬಾಲ ಕಾರ್ಮಿಕರ ನೇಮಕಾತಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):–

ಅ. ಕಾರ್ಮಿಕ ಕಾಯ್ದೆ 1948ರ ಪ್ರಕಾರ 14ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲ ಕಾರ್ಮಿಕರನ್ನು ನೊಂದಾಯಿತ ಕಾರ್ಖಾನೆಗಳಲ್ಲಿ ನೇಮಿಸಿಕೊಳ್ಳುವಂತಿಲ್ಲ. ಕೆಲವೊಂದು ಅಸಂಘಟಿತ ವಿಭಾಗಗಳಲ್ಲಿ ಮತ್ತು ಸಣ್ಣ ಸಂಸ್ಥೆಗಳು ಅಂದರೆ ಗ್ಯಾರೇಜುಗಳು, ಸೈಕಲ್ ಶಾಪ್, ಅಂಗಡಿಗಳು, ಹೋಟೆಲ್‌ಗಳು ಇತ್ಯಾದಿ ಇಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ಸಂದರ್ಭಗಳು ಇವೆ.

ಆ. ಬಾಲ ಕಾರ್ಮಿಕರನ್ನು ಕಾನೂನು ಬಾಹಿರವಾಗಿ ನೇಮಿಸಿಕೊಂಡಿದ್ದ ಸಂದರ್ಭಗಳು ಇಲಾಖಾ ಅಧಿಕಾರಿಗಳ ಗಮನಕ್ಕೆ ಬಂದಾಗ ಅಂಥಹ ಮಾಲೀಕರಿಗೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವುದು ಕಾನೂನು ಬಾಹಿರ ಎಂದು ಬೋಧಿಸುವುದಲ್ಲದೆ, ಅಂತಹವರ ವಿರುದ್ಧ ಕಾನೂನಿನ ಉಲ್ಲಂಘನೆಯನ್ನು ಮುಂದುವರೆಸುವುದನ್ನು ಕಠಿಣವಾಗಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

ಇ. ಇಲ್ಲ.

ಈ. ಈ ಕೆಳಗೆ ನಮೂದಿಸಿರುವ ಕಾಯ್ದೆಗಳಡಿಯಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳದಂತೆ ಮತ್ತು ಕಾನೂನು ರೀತಿಯಲ್ಲಿ ನಿಷೇಧ ಮತ್ತು ಕ್ರಮಬದ್ಧ (ರೆಗ್ಯೂಲೇಟ್) ಗೊಳಿಸುತ್ತದೆ.

1. ಬಾಲ ಕಾರ್ಮಿಕ (ನಿಷೇಧ ಮತ್ತು ನಿರ್ಬಂಧ) ಕಾಯಿದೆ 1986.
2. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ.
3. ಕಾರ್ಖಾನೆಗಳ ಕಾಯಿದೆ
4. ಪ್ಲಾಂಟೇಷನ್ ಕಾರ್ಮಿಕ ಕಾಯಿದೆ
5. ವಾಹನ ಸಾರಿಗೆ ಕಾಯಿದೆ
6. ಬೀಡಿ ಮತ್ತು ಸಿಗಾರ್ ವರ್ಕರ್ಸ್ ಕಾಯಿದೆ.